ಮುಂದೆ ಇಂಗ್ಲಿಷರ ಗೂಢಾಚಾರನಿಗೆ ರಷ್ಯಾದಲ್ಲಿ ಆಶ್ರಯ ನೀಡುವುದು, ಸರ್ಕಾರೀ ಆಸ್ಪತ್ರೆಗಳ ಕಂಪ್ಯೂಟರಿನ ಮೂಲಕ ಹೊರದೇಶಗಳಿಗೆ ಸಂಪರ್ಕ ನೀಡುವುದು ಇತ್ಯಾದಿ. ಅಂಥವರು ಒಬ್ಬಿಬ್ಬರು ಸಿಕ್ಕಿಹಾಕಿಕೊಂಡ ಅನಂತರ ಸರ್ಕಾರಕ್ಕೆ ಎಲ್ಲರ ಮೇಲೂ ಗುಮಾನಿ. ನಾವು ನಿನ್ನನ್ನು ಗಮನಿಸುತ್ತಿರುತ್ತೇವೆ ಅಂತ ಯಾರೂ ನೇರವಾಗಿ ಹೇಳದಿದ್ದರೂ, ಯಾರೋ ಒಬ್ಬರು ಗಮನಿಸುತ್ತಿರುತ್ತಾರೆ ಅಂತ ಎಲ್ಲರಿಗೂ ಗೊತ್ತು..."

"ಹೌದಾ?..." ಅಂತ ಅಬ್ದುಲ್ ಅಜೀಜ್ ದೊಡ್ಡದಾಗಿ ಬಾಯ್ತೆರದ. ನಮ್ಮ ಟೇಬಲ್ಲಿಗೆ ಒಂದು ಬಗೆಯ ನಿಗೂಢ ಆತಂಕ ಮುತ್ತಿಕೊಳ್ಳತೊಡಗಿತು.

ವೈನಿನ ಕಾರಣವೋ ಅಥವಾ ಭಯದಿಂದಲೋ ಗಂಟಲು ಒಣಗಿದಂತೆನಿಸಿ ಎಲ್ಲರೂ ಸುತ್ತಲೂ ಒಮ್ಮೆ ನೋಡಿದೆವು. ನಾವು ಕಲರವ ನಿಲ್ಲಿಸಿ ಥಟ್ಟನೆ ನಿಶ್ಯಬ್ದವಾಗಿದ್ದರಿಂದ ಮಿಕ್ಕ ಟೇಬಲ್ಲಿನವರು ತಮ್ಮ ಮಾತು ನಿಲ್ಲಿಸಿ ನಮ್ಮ ಕಡೆ ನೋಡುತ್ತಿದ್ದರು. ಅವರಲ್ಲಿ ಯಾರಾದರೂ ಕೆ.ಜಿ.ಬಿ.ಯವರು ಇದ್ದರೆ... ಅಂತ ಭಯವಾಗಿ ನಾವು ಆ ಕಡೆ ನೋಡುವುದನ್ನು ನಿಲ್ಲಿಸಿದೆವು.

ನಮ್ಮ ಮೈಮೇಲಿನ ಕೂದಲುಗಳು ನಿಮಿರಿ ನಿಂತಿದ್ದವು. ಭಯದಿಂದ ಚಳಿಯ ನಡುಕವೊಂದು ನಮ್ಮ ನರಮಂಡಲಗಳನ್ನು ತೂರಿ ಹೋಯಿತು. ಸದಾ ಯಾರಾದರೂ ನಮ್ಮನ್ನು ಗಮನಿಸುತ್ತಿದ್ದರೆ, ಗುಮಾನಿ ಪಡುತ್ತಿದ್ದರೆ ಎಂತಹ ಹಿಂಸೆ ಎನ್ನುವುದು ಥಟ್ಟನೆ ಎಲ್ಲರ ಅರಿವಿಗೂ ಬಂದು ಬಿಟ್ಟಿತು.

"ನಿಜವಾ?'' ಅಂತ ಮತ್ತೆ ಕೇಳಿದೆವು.

"ಯಾ... ಮೇ ಬಿ?...'' ಅಂತ ಭುಜ ಹಾರಿಸಿ ತುಂಟ ನಗೆ ನಕ್ಕ ಡಿಮಿಟ್ರಾವ್‌ನ ಬೆನ್ನಿಗೆ ಬರ್ಕಾ ದೊಡ್ಡದೊಂದು ಗುದ್ದು ಕೊಟ್ಟಳು. ಎಲ್ಲರೂ ಮೊದಲ ಬಾರಿಗೆ ಹಗೂರಕ್ಕೆ ನಕ್ಕೆವು. ಅವನು ನಿಜ ಹೇಳುತ್ತಿದ್ದಾನೋ, ಸುಳ್ಳು ಹೇಳುತ್ತಿದ್ದಾನೋ ಎನ್ನುವುದನ್ನು ಈಗ ನಾವೇ ನಿರ್ಧರಿಸಬೇಕಿತ್ತು!

ನನಗೆ ಮಾತ್ರ ಇದು ನಿಜವೆಂದೇ ಅನಿಸಿತು. ಯಾಕೆಂದರೆ, ನನ್ನ ಚಿಕ್ಕಪ್ಪ ಒಬ್ಬರು 'ನಾಸಾ' ದಲ್ಲಿ ಕೆಲಸಮಾಡುತ್ತಿದ್ದರು. ವಿಜ್ಞಾನಿಯಾದ ಅವರು ಅಮೆರಿಕದಿಂದ ಇಂಗ್ಲೆಂಡಿಗೆ ಬಂದಾಗ ಆಗಾಗ ಭೇಟಿಯಾಗುತ್ತಿದ್ದರು. ಅವರ ಚಲನವಲನದ ಮೇಲೆ, ಅವರು ಬೆರೆಯುವ ಜನರ ಹಿನ್ನೆಲೆಯ ವಿವರಗಳ ಮೇಲೆ ಅಮೆರಿಕದ ನಾಸಾ ಗೂಢಾಚಾರಿಕೆಯ ನಿಗಾ ಇಟ್ಟಿತ್ತು ಅಂತ ಅವರು ನನಗೆ ತಿಳಿಸಿದ್ದರು. ಅವರ ಕಂಪ್ಯೂಟರನ್ನು ಕೂಡ 'ನಾಸಾ' ರಹಸ್ಯವಾಗಿ ಟ್ಯಾಪ್ ಮಾಡಿರುವ ಸಾಧ್ಯತೆಯನ್ನು ಹೇಳಿದ್ದರು. ಅವರೇನೋ ರಹಸ್ಯ ಚಟುವಟಿಕೆಯಲ್ಲಿ ತೊಡಗಿರಬಹುದು, ಅದಕ್ಕೇ ಈ ಎಲ್ಲ ಎಚ್ಚರಿಕೆ ಅಂತ ಆಗ ಅನ್ನಿಸಿತ್ತು. ಆದರೆ, ಡಿಮಿಟ್ರಿಯೂ ನನ್ನಂತೆಯೇ ವೈದ್ಯನಲ್ಲವೇ? ಅವನ ಮೇಲೆ...

ಒಂದರೆಕ್ಷಣ, ಸದಾ ದೈಹಿಕ ಕಸರತ್ತುಗಳ ಬಗ್ಗೆ, ದೇಹದಾರ್ಢ್ಯತೆಯ ಬಗ್ಗೆ ಗಮನ ಕೊಡುವ ಡಿಮಿಟ್ರಿ ಸ್ವತಃ ಕೆ.ಜಿ.ಬಿ.ಯವನಾಗಿ ಇಂಗ್ಲೆಂಡಿಗೆ ಬಂದಿದ್ದರೆ? ಅವನು ಕುಡಿಯದೆ ಸದಾ ಪೂರ್ತಿ ಎಚ್ಚರದ ಸ್ಥಿತಿಯಲ್ಲಿಯೇ ಇರುತ್ತಾನೆ ಅನ್ನುವ ವಿಚಾರ ಹಾದು ಹೋಯಿತು. ಅವನ ಕಡೆ ಮತ್ತೊಮ್ಮೆ ನೋಡಿದೆ. ಹಾಗನ್ನಿಸಲಿಲ್ಲ. ನಿಜಕ್ಕೂ ಗೂಢಚಾರನಾಗಿದ್ದರೆ ಅವನೇ ಈ ವಿಚಾರ ಯಾಕೆ ಹೇಳುತ್ತಿದ್ದ? ಎನ್ನಿಸಿತು. ನನ್ನ ಕೆಟ್ಟ ಸಂಶಯಗಳು ಬಲಗೊಳ್ಳುವ ಮುನ್ನವೇ ಅದನ್ನು ಕಿತ್ತೊಗೆಯುವಂತೆ, ತಲೆ ಕೊಡವಿಕೊಂಡು ನಕ್ಕೆ.

ಅನುಮಾನ, ಆತಂಕ, ನಿರಾಶೆ, ಅವಮಾನ, ಅವಲಂಬನೆಗಳನ್ನು ತೊಡೆದು, ನನ್ನ ಸ್ವಾತಂತ್ರ್ಯವನ್ನು ನನ್ನ ಬದುಕಿನಲ್ಲಿ ಕಾಪಿಟ್ಟುಕೊಂಡಿದ್ದೆ. ನನ್ನ ಬೆನ್ನು ಹತ್ತಿದವರು ಯಾರೂ ಇರಲಿಲ್ಲ. ಮನಸ್ಸು ನಿರಾಳವೆನಿಸಿತು. ಒಂಟಿತನದಲ್ಲೂ ಬಿಡುಗಡೆಯಿದೆಯೇನೋ?

ಅಷ್ಟರಲ್ಲಿ ಹೊರಗಿನ ಚಳಿಗೆ ಹಿತವೆನಿಸುವ ಬಿಸಿಯಾದ ಸೂಪ್ ಬಂತು. ಅಲ್ಲೇ ಇಟ್ಟಿದ್ದ ಸಾಲ್ಟ್ ಮತ್ತು ಪೆಪ್ಪರನ್ನು ಚೆನ್ನಾಗಿ ಕಲಸಿ, ಜೊತೆಗೆ ಕೊಟ್ಟ ಬನ್ನನ್ನು ಅದ್ದಿ ತಿನ್ನತೊಡಗಿದೆ. ಎಲ್ಲಿ ಹೋದರೂ